ಇ) ಇದರಿಂದಾಗಿ ರೈತರಿಗೆ ಬಹಳ ತೊಂದರೆಯಾಗುವುದೂ ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ರೈತರಿಗಾಗಿರುವ ಅನ್ಯಾಯವನ್ನು ತಪ್ಪಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಈ ಕೆಳಕಂಡ ಸಂಸ್ಥೆಗಳು ಬಿತ್ತನೆ ಬೀಜಗಳನ್ನು ರಾಜ್ಯದಲ್ಲಿ ಮಾರಾಟ ಮಾಡುತ್ತಿರುತ್ತವೆ.

ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು

೧. ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ.
೨. ರಾಷ್ಟ್ರೀಯ ಬೀಜ ನಿಗಮ ನಿಯಮಿತ.
೩. ಕರ್ನಾಟಕ ಕೃಷಿ ಕೈಗಾರಿಕೆ ನಿಗಮ ನಿಯಮಿತ.
೪. ಸಹಕಾರಿ ಸೊಸೈಟಿಗಳು.
೫. ಕರ್ನಾಟಕ ರಾಜ್ಯ ಸಹಕಾರಿ ಎಣ್ಣೆಕಾಳು ಬೆಳೆಗಾರರ ಮಹಾ ಮಂಡಳಿ ನಿಯಮಿತ.

ಖಾಸಗಿ ಸಂಸ್ಥೆಗಳು

೧. ಮಹೀಂದ್ರ ಹೈಬ್ರಿಡ್ ಸೀಡ್ಸ್ ಕಂಪನಿ.
೨. ಮಹಾರಾಷ್ಟ್ರ ಹೈಬ್ರಿಡ್ ಸೀಡ್ಸ್ ಕಂಪೆನಿ.
೩. ಮೆ।। ಇ. ಐ. ಡಿ. ಪ್ಯಾರಿ ನಿಯಮಿತ.
೪. ಮೆ।। ನಾಥ್ ಸೀಡ್ಸ್.
೫. ಮೆ।। ಸೌಭಾಗ್ಯ ಸೀಡ್ಸ್.
೬. ಮೆ।। ಮಂಗಳ ಸೀಡ್ಸ್.
೭. ಮೆ।। ಪಯಾನೀರ್ ಸೀಡ್ಸ್.

ಆ) ಮೇಲೆ ನಮೂದಿಸಿರುವ ಎಲ್ಲಾ ಸಂಸ್ಥೆಗಳು ಕ್ರಮಬದ್ಧ ಪಾಯಿದೆಯುಳ್ಳ ಗುಣಮಟ್ಟದ ಬೀಜಗಳನ್ನು ತಮ್ಮ ಮಾರಾಟ ಮಳಿಗೆಗಳಿಂದ ರಾಜ್ಯಾದ್ಯಂತ ಮಾರಾಟ ಮಾಡುತ್ತಿರುವುದುಂಟು. ಆದರೂ, ಕೆಲವೊಮ್ಮೆ ಕಡಿಮೆ ಮೊಳಕೆ ಬರಿದಿರುವ ಪ್ರಕರಣಗಳುಂಟು.

ಇ) ಹೌದು. ಕೆಲವು ಸಂದರ್ಭಗಳಲ್ಲಿ ಕಳಪೆ ಗುಣಮಟ್ಟದ ಬೀಜಗಳ ಬಳಕೆಯಿಂದ ರೈತರಿಗೆ ಆಗುತ್ತಿರುವ ನಷ್ಟವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಬೀಜ ಅಧಿ ನಿಯಮ ೧೯೬೬ರ ಪ್ರಕಾರ ಕಳಪೆ ಗುಣಮಟ್ಟ ಬೀಜಗಳ ಮಾರಾಟವನ್ನು ತಡೆಹಿಡಿಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಹುಕ್ಕೇರಿ ತಾಲ್ಲೂಕಿನಲ್ಲಿ ಕೆರೆಗಳ ನಿರ್ಮಾಣ ಹಾಗೂ ಪಿತ ನೀರಾವರಿ ಕಾಮಗಾರಿಗಳ ಬಗ್ಗೆ

೧೧೯ (ಖಿಳ) ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ (ಸಂಕೇಶ್ವರ).—ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ೧೯೮೦ರ ನಂತರ ಮಂಜೂರಾಗಿರುವ ಕೆರೆಗಳ ಸಂಖ್ಯೆ ಹಾಗೂ ಸ್ಥಳಗಳ ಹೆಸರೇನು ?

ಆ) ಕೆರೆಗಳ ನಿರ್ಮಾಣದಲ್ಲಿ ನಿರ್ಮಾಣದ ಕಾರ್ಯವು ಮಂದಗತಿಯಲ್ಲಿ ಸಾಗುತ್ತಿರುವುದಕ್ಕೆ ಕಾರಣವೇನು ?

ಇ) ಬೂರಗಲ್, ರಾಷಿಂಗ್, ಕುರುಬರ ಕೊಡಿ ಮಸರಗುಪ್ಪಿ ಕೆರೆಗಳು ಯಾವಾಗ ಪೂರ್ತಿಗೊಳ್ಳುವುದು ?

ಈ) ಸಲಾಮವಾಡಿ ಡಿಡ್ಡಿನಾಗನೂರು ಹಿರಣ್ಯಕೇಶಿ ನದಿಯಿಂದ ಕೊಚಂ ಏತ ನೀರಾವರಿ ಕೆಲಸಗಳು ಯಾವ ಹಂತದಲ್ಲಿ ಇವೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಆ) ನಾಲ್ಕು ಕೆರೆಗಳು ಕೆಳಕಂಡ ಸ್ಥಳಗಳಲ್ಲಿ ಮಂಜೂರಾಗಿವೆ.—(೧) ಭೈರಾಪುರ (೨) ಹರಗಾಪುರ (೩) ಅಮ್ಮಣಗಿ (೪) ಬೆಳ್ವಿ

ಆ)ಹರಗಾಪುರ ಮತ್ತು ಬೆಳ್ವಿ ಕೆರೆಗಳ ನಿರ್ಮಾಣ ಕಾರ್ಯ ಭೂಸ್ವಾಧೀನ ಸಮಸ್ಯೆಯಿಂದಾಗಿ ವಿಳಂಬಗೊಂಡಿದೆ. ಭೈರಾಪುರ ಕೆರೆಯ ಕೆಲಸವು ವಿಶ್ವ ಬ್ಯಾಂಕ್ ನೆರವಿನೊಡನೆ ತೆಗೆದುಕೊಳ್ಳಲಾಗಿದ್ದು ಪ್ರಗತಿಯಲ್ಲಿದೆ. ಅಮ್ಮಣಗಿ ಇಂಗುಕೆರೆಯ ಕೆಲಸ ಪೂರ್ಣಗೊಂಡಿದೆ.

ಇ) ಈ ಕೆರೆಗಳ ಅಂದಾಜುಗಳು ಇನ್ನೂ ಮಂಜೂರಾಗಬೇಕಾಗಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ೧) ಸಾಲಂಪಾಡಿ ಏತ ನೀರಾವರಿ ಯೋಜನೆ.—ಸಾಲಂಪಾಡಿ ನೀರಾವರಿ ಸಹಕಾರ ಸಂಘದವರಿಂದ ಬಾಕಿ ಡೆಪಾಜಿಟ್ ಹಣ ಬಾರದೇ ಇರುವುದರಿಂದ ಯೋಜನೆಯು ಸ್ಥಗಿತಗೊಂಡಿದೆ.

೨) ಡಿಡ್ಡಿನಾಗನೂರು ಏತ ನೀರಾವರಿ ಯೋಜನೆ.—ಅಂದಾಜನ್ನು ತಯಾರಿಸಲಾಗಿದ್ದು, ಮುಖ್ಯ ಇಂಜಿನಿಯರ್ ನೀರಾವರಿ (ಉತ್ತರ) ಬೆಳಗಾವಿ ಅವರಲ್ಲಿ ಪರಿಶೀಲನೆಯಲ್ಲಿದೆ.

೩) ಕೊಚರಿ ಏತ ನೀರಾವರಿ ಯೋಜನೆ.—ಈ ಯೋಜನೆಯು ಇನ್ನೂ ಅನ್ವೇಷಣೆಯಲ್ಲಿದೆ.

ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡುವ ಬಗ್ಗೆ

೧೩೧ (೧೭೫). ಶ್ರೀ ಪಿ. ಬಿ. ಓಂಕಾರ್ ಮೂರ್ತಿ (ಕಡೂರು).—ಮಾನ್ಯ ಶಿಕ್ಷಣಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಚಿಕ್ಕಮಗಳೂರು ಜಿಲ್ಲೆ ಕಡೂರು ಹಾಗೂ ಪಂಚಸಹಕಾರಿಗಳಲ್ಲಿ ಸರ್ಕಾರದ ವತಿಯಿಂದ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡಲು ಸರ್ಕಾರದವರಿಗೆ ಶಿಫಾರಸ್ಸು ಆಗಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ೧೯೮೬-೮೭ನೇ ಸಾಲಿಗಾದರೂ ಸರ್ಕಾರದ ವತಿಯಿಂದ ಪ್ರಥಮ ದರ್ಜೆ ಕಾಲೇಜು ಮೇಲ್ಕಂಡ ಸ್ಥಳಗಳಿಗೆ ಮಂಜೂರು ಮಾಡಲು ಕ್ರಮ ಕೈಗೊಳ್ಳುವರೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಹೌದು.

ಆ) ಪರಿಶೀಲಿಸಲಾಗುವುದು.

ಪದವಿ ಪೂರ್ವ ಕಾಲೇಜುಗಳ ಬಗ್ಗೆ

೧೩೨ (೧೭೪) ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಪಂಚಸಹಕಾರಿ ಮತ್ತು ಕಡೂರು ಎರಡೂ ಜಾಗದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾರಂಭವಾಗಿ ೧೫-೧೬ ವರ್ಷಗಳಾಗಿದ್ದು ಅದರಲ್ಲಿ ಕಟ್ಟಡ ಅವಶ್ಯಕವಿದ್ದು ಅದನ್ನು ಕಟ್ಟುವಂತೆ ಸರ್ಕಾರದವರಿಗೆ ಮನವಿ ಸಲ್ಲಿಸಿದ್ದಾಗ್ಯೂ ಈವರೆವಿಗೂ ಸರ್ಕಾರದವರು ಕ್ರಮಕೈಗೊಳ್ಳದಿರಲು ಕಾರಣಗಳೇನು ?